[1] ಅಮೇರಿಕನ್ ಇಂಡಿಯಾ ಫೌಂಡೇಷನ್ ಟ್ರಸ್ಟ್ (AIFT ) ಕರ್ನಾಟಕದ ಆಯ್ದು 11 ಜಿಲ್ಲೆಯ 200 ಪ್ರೌಢಶಾಲೆಗಳಲ್ಲಿ ಶಿಕ್ಷಕರನ್ನು ತಂತ್ರಜ್ಞಾನ ಬಳಕೆಯಲ್ಲಿ ಬಲವರ್ದನೆಗೊಳಿಸಿ, ತಮ್ಮ ದೈನಂದಿನ ಪಾಠ ಬೋಧನೆಯಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಪರಿಣಾಮಕಾರಿ ಬೋಧನೆ ಮಾಡಲು ಕಾರ್ಯ ನಿರ್ವಹಿಸುತ್ತಿದೆ. ಈ ಕಾರ್ಯಕ್ರಮ ಡಿಜಿಟಲ್ ಈಕ್ವಲೈಸರ್ ಎಂದು ಕರೆಯಲ್ಪಡುತ್ತಿದೆ.

**ಅಮೇರಿಕನ್ ಇಂಡಿಯಾ ಫೌಂಡೇಷನ್ ಟ್ರಸ್ಟ್ (AIFT) :**

AIFT ಲಾಭದ ಇಚ್ಚೆಇಲ್ಲದೆ ಇರುವ ಒಂದು ಸಂಸ್ಥೆ. 2001 ರಲ್ಲಿ ಗುಜರಾತ್ ಭೂಕಂಪದಲ್ಲಿ ಸಂತ್ರಸ್ಥರಾದ ಭಾರತೀಯರ ನೆರವಿಗೆಂದು ಅಂದಿನ ಅಮೇರಿಕದ ಅಧ್ಯಕ್ಷರಾದ ಶ್ರೀ ಬಿಲ್ ಕ್ಲಿಂಟನ್ ಅವರ ಘನ ಅಧ್ಯಕ್ಷತೆಯಲ್ಲಿ ಅಮೇರಿಕಾದಲ್ಲಿರುವ ಅನಿವಾಸಿ ಭಾರತೀಯರೆಲ್ಲಾ ಸೇರಿ ಪ್ರಾರಂಭಿಸಿದ ಸಂಸ್ಥೆ. ಆ ನಂತರ ಸಂತ್ರಸ್ಥರಿಗೆಲ್ಲಾ ಸಹಾಯ ಮಾಡಿದ ಮೇಲೆ ಅದೇ ಸಂಸ್ಥೆಯನ್ನು ಮುಂದು ವರೆಸಿಕೊಂಡು ಬರುವ ತೀರ್ಮಾನ ಮಾಡಿದರು. ಅದರಂತೆ ಶಿಕ್ಷಣ , ಆರೋಗ್ಯ, ಸಮಾಜಿಕ ಸಮಾನತೆ ಹೀಗೆ ಮುಂತಾದ ವಿಷಯಗಳಲ್ಲಿ ಭಾರತಾದ್ಯಂತ ಕಾರ್ಯ ನಿರ್ವಹಿಸುತ್ತಿದೆ.

**Digital Equalizer (DE) :**

ಶಿಕ್ಷಣದಲ್ಲಿ "ನಗರದ ವಿಧ್ಯಾರ್ಥಿಗಳಿಗೂ ಮತ್ತು ಹಳ್ಳಿಯ ವಿದ್ಯಾರ್ಥಿಗಳಿಗೂ ಮಧ್ಯೆ ಇರುವ ತಾಂತ್ರಿಕ ಅಸಮಾನತೆಯನ್ನು ಹೋಗಲಾಡಿಸುವ ಉದ್ದೇಶದಿಂದ" , ಡಿಜಿಟಲ್ ಈಕ್ವಲೈಸರ್ (ಡಿ. ಇ) ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದಲ್ಲಿ ನಮ್ಮ ಸಂಪನ್ಮೂಲ ವ್ಯಕ್ತಿಗಳು ಆಯ್ದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರಿಗೆ

- ಆ ಶಾಲೆಯಲ್ಲಿರುವ ಸಂಪನ್ಮೂಲವನ್ನೇ ಬಳಸಿಕೊಂಡು ಅವರು ತಂತ್ರಜ್ಞಾನ ಪರಿಣಿತರನ್ನಾಗಿ ಮಾಡುತ್ತಾರೆ.
- ಶಿಕ್ಷಕರು ತಮ್ಮ ಪಾಠ ಬೋಧನೆಯಲ್ಲಿ ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳ ಬಹುದು ಎಂಬುದನ್ನು ತಿಳಿಸುತ್ತಾರೆ.
- ಶಿಕ್ಷಕರ ಮುಖಾಂತರ ಮಕ್ಕಳಿಗೆ ತಂತ್ರಜ್ಞಾನದ ಬಳಕೆ ಮತ್ತು ಅದರ ಉಪಯೋಗಗಳನ್ನು ತಿಳಿಯ ಪಡಿಸುತ್ತಾರೆ.

ಈ ಪ್ರಯತ್ನದಲ್ಲಿ ಹಲವಾರು ಸಂಸ್ಥೆಗಳು ನಮ್ಮೊಂದಿಗೆ ಕೈಜೋಡಿಸಿದ್ದು ಅನೇಕ ಕಾರ್ಯಕ್ರಮಗಳನ್ನು ಶಾಲೆಗಳಲ್ಲಿ ನಡೆಸಿಕೊಂಡು ಬರುತ್ತಿದ್ದೇವೆ. ಆ ಸಂಸ್ಥೆಗಳೆಂದರೆ

- Adobe
- Dell
- SVB
- Sun guard
- AMAT ಇನ್ನು ಇತರೆ ದಾನಿಗಳು

**RMSA ಮತ್ತು AIFT:**

ಸಮಾಜದಲ್ಲಿರುವ ಎಲ್ಲಾ 14 ವರ್ಷದೊಳಗಿನ ಮಕ್ಕಳಿಗೂ ಕಡ್ಡಾಯ ಶಿಕ್ಷಣ ಕೊಡಬೇಕು ಎಂಬ ಕೇಂದ್ರ ಸರ್ಕಾರದ

ಆಶಯದಂತೆ ಪ್ರಾರಂಭವಾದ RMSA ಯೊಂದಿಗೆ ನಾವು ಒಂದು ಒಡಂಬಡಿಕೆ ಮಾಡಿಕೊಂಡು 2010-11 ರಿಂದ 2012-13 ರ ವರೆಗೆ ಈ ಶಾಲೆಗಳಲ್ಲಿ ತಂತ್ರಜ್ಞಾನದ ಪರಿಣಾಮಕಾರಿ ಬಳಕೆಯನ್ನು ಮಾಡಿಕೊಳ್ಳುವುದರ ಬಗ್ಗೆ ಕಾರ್ಯ ನಿರ್ವಹಿಸುತ್ತಿದ್ದೇವೆ. ಈ ಒಡಂಬಡಿಕೆಯಂತೆ RMSA ಯು

- ಜಿಲ್ಲಾ ಮಟ್ಟದಲ್ಲಿ ಪ್ರತಿ 2 ತಿಂಗಳಿಗೊಮ್ಮೆ ಈ ಡಿ.ಇ ಶಾಲೆಗಳ ಮುಖ್ಯಶಿಕ್ಷಕರನ್ನು ಕರೆದು ಸಮಾಲೋಚನಾ ಸಭೆಯನ್ನು ಏರ್ಪಡಿಸಿ ಕಾರ್ಯಕ್ರಮದ ಮೌಲ್ಯಮಾಪನ ಮಾಡುತ್ತದೆ. ಇದಕ್ಕೆ ಹಾಜರಾಗುವ ಮು. ಶಿ . ರಿಗೆ ಸರ್ಕಾರದ ನಿಯಮದಂತೆ ½ ಡಿ. ಎ. ಮತ್ತು ಒಂದು ಮಧ್ಯಾಹ್ನದ ಊಟ ಕೊಡುತ್ತದೆ.
- ಪ್ರತಿ ವರ್ಷ ಈ DE ಶಾಲೆಗಳಲ್ಲಿ ಬಾಲಮೇಳ ನಡೆಸಲು ಪ್ರತಿ ಶಾಲೆಗೆ ರೂಪಾಯಿ 2000/- ಗಳನ್ನು ನೀಡುತ್ತಿದೆ.

ಈ ಎರಡನ್ನು ಹೊರತು ಪಡಿಸಿ ಉಳಿದಂತೆ ಉಂಟಾಗುವ ಎಲ್ಲಾ ವೆಚ್ಚವೂ AIFT ಯ ಹೊಣೆಯಾಗಿರುತ್ತದೆ.

**AIFT ಯ ಕಾರ್ಯವೈಖರಿ ಹಾಗೂ ಅದರ ಇತರ ಕಾರ್ಯಗಳು :**

- **Teachers Training :** ಪ್ರತಿ 6 ಶಾಲೆಗೆ ಒಬ್ಬರಂತೆ ನಮ್ಮ ಸಂಪನ್ಮೂಲ ವ್ಯಕ್ತಿಗಳನ್ನು ನೇಮಿಸಿರುತ್ತೇವೆ. ಅವರು ಆಯಾ ದಿನ ಸಂಬಂಧಿಸಿದ ಶಾಲೆಗೆ ಹೋಗಿ ಶಿಕ್ಷಕರ ಬಿಡುವಿನ ಅವಧಿಯಲ್ಲಿ ಶಿಕ್ಷಕರನ್ನು ತರಬೇತಿ ಗೊಳಿಸುತ್ತಾರೆ. ಅದರ ಮುಖಾಂತರ ಶಾಲೆಯಲ್ಲಿ project based learning ಆಗುವಂತೆ ಮಾಡುತ್ತಾರೆ. ಇದು 3 ವರ್ಷಗವರೆಗೆ ನಡೆಯುತ್ತಿದ್ದು ಅದಕ್ಕಾಗಿ ಒಂದು syllabus ಇದೆ. ಅದು ILTM (Instructor led training manual), 85 ಘಂಟೆಗಳ ತರಭೇತಿ ಕೈಪಿಡಿ ಯಾಗಿದೆ. ಈ ಕೈಪಿಡಿ ತಂತ್ರಜ್ಞಾನ ಮತ್ತು ಶೈಕ್ಷಣಿಕ (Critical Thinking, Creative Thinking, Collaborative Learning's ಮತ್ತು Multiple intelligence ) ವಿಷಯಗಳನ್ನು ಒಳಗೊಂಡಿದೆ. ಮೊದಲ 2 ವರ್ಷಗಳನ್ನು ನಾವು ತರಬೇತಿಗಾಗಿ ಮೀಸಲಿಟ್ಟಿದ್ದು ನಂತರದ ಕೊನೆಯ ವರ್ಷವನ್ನು ತರಭೇತಿಯ ಬಳಕೆ ಹಾಗೂ ಉಪಯ[2]ೋಗಕ್ಕಾಗಿ ಮೀಸಲಿಟ್ಟಿದ್ದೇವೆ. ಇದಕ್ಕೆ ಪೂರಕವಾಗಿ ಈ ಕೆಳಗಿನ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ.

- **DE Projects :** ಶಿಕ್ಷಕರು ತಮ್ಮ ಪಾಠ ಪ್ರಾರಂಭಿಸುವ ಮುಂಚೆ ಸಂಬಂಧಿಸಿದ ತರಗತಿಯ ಮಕ್ಕಳಲ್ಲಿ ಒಂದು ಗುಂಪನ್ನು ತಯಾರಿಸುವುದು. ಉದಾಹರಣೆಗೆ 10 ಮಕ್ಕಳ ಒಂದು ಗುಂಪು ಮಾಡಿ ಆ ಪಾಠದ ಒಂದು ಘಟಕದ ಮೇಲೆ , ಪೂರ್ವಭಾವಿ ಆಗಿ ಒಂದು ಕಿರುಪರೀಕ್ಷೆ ಮಾಡುವುದು. ಅದರ ಮೌಲ್ಯಮಾಪನದ ನಂತರ ಆ ವಿಷಯದ ಮೇಲೆ ಮಕ್ಕಳು ಅವರ ಮನೆಯಲ್ಲಿ , ಗ್ರಂಥಾಲಯದಿಂದ, ಇಂಟರ್‌ನೆಟ್ ಮುಖಾಂತರ ಮತ್ತು ಶಿಕ್ಷಕರ ಸಹಾಯದಿಂದ ಮಾಹಿತಿ ಕಲೆಹಾಕಲು ತಿಳಿಸುವುದು. ಅದನ್ನು ವಿಷಯ ಶಿಕ್ಷಕರ ಸಹಾಯ ಪಡೆದು ಕ್ರೋಢೀಕರಿಸಿ ನಂತರ ಅದರ ಒಂದು ಕಾರ್ಯಯೋಜನೆ ತಯಾರಿಸುವುದು. ಅದನ್ನು ಉಳಿದ ಆ ತರಗತಿಯ ಮಕ್ಕಳಿಗೆ ಪ್ರದರ್ಶಿಸುವುದು. ಅದೇ ಮಕ್ಕಳಿಗೆ ಆನಂತರ ಮತ್ತೆ ಮೊದಲು ನೀಡಿದ ಪ್ರಶ್ನೆಗಳನ್ನೆ ನೀಡಿ ಮತ್ತೆ ಪರೀಕ್ಷೆಮಾಡಿ ಅವರ ಪ್ರಗತಿ ಪರಿಶೀಲಿಸುವುದು. ಇದು ಪ್ರತಿ ಶಾಲೆಯಲ್ಲಿ ಪ್ರತಿ ತಿಂಗಳು ಕನಿಷ್ಠ 3 ಆಗುತ್ತಿರುತ್ತದೆ.

- **Teachers Projects :** ಶಿಕ್ಷಕರು ತಮ್ಮ ಪಾಠಕ್ಕೆ ಸಂಬಂಧಿಸಿದಂತೆ, ಮಕ್ಕಳಿಗೆ ಪರಿಣಾಮಕಾರಿಯಾಗಿ ಬೋಧನೆ ಮಾಡಲು ಸಹಕಾರಿಯಾಗುವಂತೆ ತಂತ್ರಜ್ಞಾನವನ್ನು ಬಳಸಿಕೊಂಡು ತಯಾರಿಸುವ power point presentation ಗಳು. ಇವುಗಳನ್ನು ಅವರ ಪಾಠದ ಯಾವ ಹಂತಕ್ಕೆ ಸಹಕಾರಿಯಾಗುತ್ತದೆ ಎಂದು ಶಿಕ್ಷಕರೇ ತೀರ್ಮಾನಿಸಿ ಅದನ್ನು ಬಳಸಿಕೊಂಡು ಪಾಠ ಮಾಡುತ್ತಾರೆ. ಇವು ಮಕ್ಕಳನ್ನು ಆಕರ್ಷಿಸಿ ಅವರು ಕಲಿಕೆಯಲ್ಲಿ ಆಸಕ್ತಿದಾಯಕವಾಗಿ ಭಾಗವಹಿಸುವಂತೆ ಮಾಡುತ್ತವೆ.

- **Digital Lesson Plans:** ಇಷ್ಟು ವರ್ಷಗಳು ಶಿಕ್ಷಕರು ತಮ್ಮ ಪಾಠ ಯೋಜನೆಯನ್ನು ಪುಸ್ತಕದಲ್ಲಿ ಬರೆಯುತ್ತಿದ್ದರು. ಈಗ ನಾವು DE ಕಾರ್ಯಕ್ರಮದ ಮುಖಾಂತರ ಅದನ್ನು ಕಂಪ್ಯೂಟರ್‌ನಲ್ಲಿ ಮಾಡಿಸುತ್ತಿದ್ದೇವೆ. ಅದರ ಉದ್ದೇಶ ಏನೆಂದರೆ ? ಶಿಕ್ಷಕರು ಅವರ ಪಾಠ ಯೋಜನೆಯಲ್ಲಿ ಕಲಿಕಾ ಸಾಮ[3]ಗ್ರಿಗಳು ಎಂದು ಬರೆಯುತ್ತಿದ್ದ ಜಾಗದಲ್ಲಿ ಅವರು ತಂತ್ರಜ್ಞಾನವನ್ನು ಸೇರಿಸಿಕೊಂಡು ಇನ್ನೂ ಪರಿಣಾಮಕಾರಿಯಾಗಿ ಬೋಧನೆಮಾಡಲು ಸಹಕಾರಿಯಾಗಲಿ ಎಂದು. ಉದಾಹರಣೆ : ಶಾಲೆಯಲ್ಲಿರುವ ಶೈಕ್ಷಣಿಕ ಸಿಡಿಗಳು, ಶಿಕ್ಷಕರೇ ತಯಾರಿಸಿದ PPT ಗಳು , ಇಂಟರ್‌ನೆಟ್ ನಲ್ಲಿ ಸಿಗುವ ಮಾಹಿತಿಗಳು ಇತ್ಯಾದಿ.

- **DE Periods:** ಶಿಕ್ಷಕರು ಕಂಪ್ಯೂಟರ್ ಕೊಠಡಿಯಲ್ಲಿ ದೊರೆಯುವ ಸಂಪನ್ಮೂಲಗಳನ್ನು ಬಳಸಿಕೊಂಡು ಅವರ ಪಾಠ ಬೋಧನೆಯನ್ನು ಕಂಪ್ಯೂಟರ್ ಸಹಾಯದಿಂದ ಮಾಡುವುದು. ಪ್ರತಿಶಾಲೆಯಲ್ಲಿ ಪ್ರತಿ ವಾರಕ್ಕೆ, ಪ್ರತಿಶಿಕ್ಷಕರು 2 ಈ ತರಹದ ತರಗತಿಗಳನ್ನು ತೆಗೆದುಕೊಳ್ಳಬೇಕು.

- **ಬಾಲಮೇಳ :** ಇದು ಮಕ್ಕಳ ಒಂದು Fun Fair , ಇಲಾಖೆಯಲ್ಲಿ ಬೇರೆ ಬೇರೆ ರೀತಿಯ ಮೇಳಗಳು ನಡೆಯುವ ಹಾಗೇ ಶಾಲಾ ಮಟ್ಟದಲ್ಲಿ ಎಲ್ಲಾ ಶಿಕ್ಷಕರು ತಮ್ಮ ಪ್ರತಿಭೆಯನ್ನ ಮಕ್ಕಳ ಮುಖಾಂತರ ಪ್ರದರ್ಶಿಸುವ ಒಂದು ಮೇಳ. ಇಲ್ಲಿನ ಮುಖ್ಯ ಉದ್ದೇಶ ಮಕ್ಕಳಿಗೆ ಜೀವನ ಕಲೆಯನ್ನು ಕಲಿಸುವುದು ಮತ್ತು ಸ್ವಕಲಿಕೆಗೆ ಪ್ರೇರೇಪಣೆ ನೀಡುವುದು. ಇಲ್ಲಿ ಮಕ್ಕಳು ತಮ್ಮ ದೈನಂದಿನ ಜೀವನದಲ್ಲಿ ಮುಖ್ಯವಾಗಿ ಬರುವ ವಿಷಯಗಳ ಬಗ್ಗೆ ಪ್ರದರ್ಶನ ಮಾಡುತ್ತಾರೆ ಜೊತೆಗೆ ತಾವು ಆ ಶೈಕ್ಷಣಿಕ ವರ್ಷದಲ್ಲಿ ಕಲಿತ ವಿಷಯಗಳನ್ನು ಪ್ರದರ್ಶಿಸುತ್ತಾರೆ. ಎಲ್ಲಾ ವಿಷಯಗಳಂತೆ ಕಂಪ್ಯೂಟರ್ ಸಹ ಒಂದು ಅವರ ಕಲಿಕೆಯ ಬಾಗವಾಗಿದ್ದು ಅದಕ್ಕೆ ಸಂಬಂಧಿಸಿದ stall ಸಹ ಮಾಡಿ ಬಂದಂತಹ ವೀಕ್ಷಕರಿಗೆ ತಂತ್ರಜ್ಞಾನದ ಉಪಯೋಗಗಳನ್ನು ವಿವರಿಸುತ್ತಾರೆ.

ಈ ಕಾರ್ಯಕ್ರಮಕ್ಕೆ ಶಿಕ್ಷಣ ಇಲಾಖೆ 2000/- ರೂಪಾಯಿಗಳ್ನು ನೀಡುತ್ತಿದ್ದು ಉಳಿದ ಹಣವನ್ನು ಶಾಲೆ ತನ್ನ ಸಮುದಾಯದ ಸಹಕಾರದಿಂದ ಭರಿಸಿಕೊಂಡು ಮಾಡುತ್ತದೆ. ಈ ಕಾರ್ಯಕ್ರಮಕ್ಕೆ ಆ ಶಾಲೆಯ ಅಕ್ಕಪಕ್ಕದ ಶಾಲೆಗಳ ಮಕ್ಕಳು, ಶಿಕ್ಷಕರು ಮತ್ತು ಊರಿನ ನಾಗರೀಕರು ಬಂದು ಮಕ್ಕಳ ಪ್ರದರ್ಶನವನ್ನು ವೀಕ್ಷಿಸುತ್ತಾರೆ. ಇದರ ಮುಖಾಂತರ ಶಾಲೆಗೆ ಸಮುದಾಯದ ಸಹಕಾರವೂ ದೊರೆಯುತ್ತಿರುವುದು ಕಂಡುಬಂದಿದೆ.

- **DE Contest:** ಪ್ರತಿ ವರ್ಷ AIFT ಕಾರ್ಯನಿರ್ವಹಿಸುತ್ತಿರುವ ಶಾಲೆಗಳ ವಿದ್ಯಾರ್ಥಿಗಳಿಗೆ ಒಂದು ಸ್ಪರ್ಧೆ ಏಪರ್ಡಿಸುತ್ತಿದೆ. ಈ ಸ್ಪರ್ಧೆಗೆ AIFT ಯು ಒಂದು ವಿಷಯವನ್ನು ಕೊಟ್ಟು ಅದರ ಮೇಲೆ ಮಕ್ಕಳು ಶಿಕ್ಷಕರ ಸಹಕಾರದಿಂದ

ಸ್ಥಳೀಯ ವ್ಯಕ್ತಿಗಳನ್ನು ಸಮೀಕ್ಷೆಮಾಡಿ ಅದರ ಬಗ್ಗೆ ಒಂದು project ತಯಾರಿಸಿ ಕೊಡುವಂತೆ ತಿಳಿಸುತ್ತದೆ. ಇದರಲ್ಲಿ ಮಕ್ಕಳು, ಶಿಕ್ಷಕರು, ಸಾರ್ವಜನಿಕರು ಬಾಗವಹಿಸಿ ಕೊಟ್ಟಿರುವ ವಿಷಯಕ್ಕೆ ಅವರದೇ ಆದಂತಹ ಒಂದು ತೀರ್ಮಾನವನ್ನು ಮಂಡಿಸುತ್ತಾರೆ. ಇದು ರಾಜ್ಯಮಟ್ಟದ ಸ್ಪರ್ದೆಯಾಗಿದ್ದು ಭಾಗವಹಿಸಿದ ಎಲ್ಲರಿಗೂ AIFT ಯೇ ಪ್ರಮಾಣಪತ್ರವನ್ನು ನೀಡುತ್ತದೆ ಹಾಗೆ ರಾಜ್ಯ ಮಟ್ಟದಲ್ಲಿ ವಿಜೇತರಾದ ಶಾಲೆಗಳಿಗೆ ನೆನಪಿನ ಕಾಣಿಕೆ ಮತ್ತು ಪ್ರಮಾಣಪತ್ರವನ್ನು ನೀಡಿ ಗೌರವಿಸಲಾಗುವುದು.

- **DST – Digital Story Telling :** ಶಾಲೆಗಳಲ್ಲಿರುವ ಕ್ಯಾಮರಾಗಳ ಜೊತೆಗೆ AIFT ಯು ಸಹ ತನ್ನ ಸಂಪನ್ಮೂಲ ವ್ಯಕ್ತಿ ಗಳಿಗೆ ಕ್ಯಾಮರಾಗಳನ್ನು ನೀಡಿ ಅದರ ಮುಖಾಂತರ ಯಾವುದಾದರೂ ಒಂದು ವಿಷಯವನ್ನು ಆಯ್ದುಕೊಂಡು ಮಕ್ಕಳು ಅದಕ್ಕೆ ಪೂರಕವಾಗುವ ಫೋಟೋಗಳನ್ನು ಕ್ಲಿಕ್ಕಿಸಿ ತರುವುದು. ಆ ಫೋಟೋಗಳನ್ನು ಕ್ರಮವಾಗಿ Power Point ನಲ್ಲಿ ಅಥವಾ Windows Movie maker ನಲ್ಲಿ ಜೋಡಿಸಿ ಫೋಟೋಗೆ ಶೀರ್ಷಿಕೆಗಳನ್ನು ನೀಡುವ ಮುಖಾಂತರ ಅದನ್ನು ಅಭಿವ್ಯಕ್ತಿಗೊಳಿಸುವ ಪ್ರಕ್ರಿಯೆ

- **Teachers Sharing Workshop :** ಪ್ರತಿ ತಿಂಗಳೂ ಸಹ ಜಿಲ್ಲಾ ಮಟ್ಟದಲ್ಲಿ ಶಿಕ್ಷಕರು ಮಾಡಿದ project ಗಳ ಮೌಲ್ಯಮಾಪನ ಮತ್ತು ಅದರ ಮೇಲೆ ಸಮಾಲೋಚನಾ ಸಭೆಯನ್ನು ಇಟ್ಟುಕೊಳ್ಳುತ್ತೇವೆ. ಇದರಲ್ಲಿ ಆಯಾ ಜಿಲ್ಲೆಯ ಆಯ್ದ ಶಿಕ್ಷಕರು ಆ projects ಗಳನ್ನು ನೋಡಿ ತಮ್ಮ ಅಭಿಪ್ರಾಯ ಮಂಡಿಸುತ್ತಾರೆ. ಅದರ ಆಧಾರದ ಮೇಲೆ ಆ projects ಗಳನ್ನು ಶಿಕ್ಷಕರಿಗೆ ಸಹಾಯಕವಾಗುವಂತೆ ಮಾಡಿ ಅದನ್ನು ಒಂದು DVD ಯಲ್ಲಿ ಹಾಕಿ ಎಲ್ಲಾ ಶಾಲೆಗೂ ವಿತರಿಸುವ ಯೋಜನೆ ಹಾಕಿದ್ದೇವೆ.

- **Centre for Teachers Excellent:** ಇದು ನಮ್ಮ ಕ್ರಿಯಾತ್ಮಕ ಯೋಚನೆಗಳಲ್ಲಿ ಒಂದಾದ ಕಾರ್ಯಕ್ರಮ. ಇದರಲ್ಲಿ ನಾವು ನಮ್ಮ ಸಹ ಭಾಗಿಗಳಾದ Applied Material (AMAT) ಇವರ ಸಹಕಾರದೊಂದಿಗೆ ಕೆಲವು ಆಯ್ದ ಶಾಲೆಗಳಿಗೆ ಶಿಕ್ಷಕರ ಉಪಯೋಗಕ್ಕೆಂದು 4 ಕಂಪ್ಯೂಟರ್‌ಗಳನ್ನು, ಅದಕ್ಕೆ ಬೇಕಾಗುವ UPS, Internet ಇವುಗಳನ್ನು ಒದಗಿಸಿ ಶಿಕ್ಷಕರು ವಿಶೇಷವಾಗಿ ಈ ಕಂಪ್ಯೂಟರ್‌ಗಳನ್ನು ಬಳಸಿಕೊಂಡು ಮೇಲೆ ತಿಳಿಸಿದ DE ಕಾರ್ಯಕ್ರಮದ ಎಲ್ಲಾ ಕಾರ್ಯಗಳನ್ನು ಉಳಿದ ಶಾಲೆಗಳಿಗಿಂತ ಉತ್ತಮವಾಗಿ ಮಾಡಿಕೊಂಡು ಹೋಗುವಂತೆ ಮಾಡುವುದು. ಇಲ್ಲಿ ಶಿಕ್ಷಕರು ಉಳಿದ ಶಾಲೆಗಳಿಗೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಾರೆ. ಈ ಶೈಕ್ಷಣಿಕ ವರ್ಷದಿಂದ ಇದೇ ಯೋಜನೆಯಲ್ಲಿ ಶಿಕ್ಷಕರ ಬೇಡಿಕೆಯಂತೆ ಒಂದು ಲ್ಯಾಪ್‌ಟಾಪ್ ಕೊಡುವ ಉದ್ದೇಶ ಹೊಂದಿದ್ದು ಇನ್ನು ಮುಂದೆ ತಂತ್ರಜ್ಞಾನ ಶಿಕ್ಷಕರು ಬೇಕೆನಿಸಿದಾಗಲೆಲ್ಲಾ ತರಗತಿ ಕೋಣೆಗೆ ತೆಗೆದುಕೊಂಡು ಹೋಗಿ ಉಪಯೋಗಿಸಲು ಸಹಕಾರಿಯಾಗುವಂತೆ ನೋಡಿಕೊಳ್ಳಲಾಗುವುದು.

- **Scholarship Program:** ನಮ್ಮ DE ಕಾರ್ಯಕ್ರಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಾಲೆಗಳ ಲ್ಲಿ ಇರುವ ಪ್ರತಿಭಾವಂತ ಬಡ ಮಕ್ಕಳಿಗೆ ಅವರ SSLC ನಂತರ [4] ಶಿಕ್ಷಣಕ್ಕೆ ಸಹಕಾರಿಯಾಗಲೆಂದು ನಮ್ಮ ಸಹಬಾಗಿಗಳಾದ AMAT ನವರ ಸಹಭಾಗಿತ್ವದಲ್ಲಿ ಪ್ರತಿ ವರ್ಷ 10 ಮಕ್ಕಳಿಗೆ 2 ವರ್ಷಗಳ ಕಾಲ 12000/- ರೂಪಾಯಿಗಳಂತೆ ವಿದ್ಯಾರ್ಥಿವೇತನ ನೀಡುವ

ಕಾರ್ಯಕ್ರಮ. ಇದರಲ್ಲಿ ನಮ್ಮ ಶಾಲೆಗಳಲ್ಲಿ SSLC ಪರೀಕ್ಷೆಯಲ್ಲಿ ಅತೀ ಹೆಚ್ಚಿನ ಅಂಕಪಡೆದ 5 ಜನ ಹೆಣ್ಣುಮಕ್ಕಳು ಹಾಗೂ 5 ಜನ ಗಂಡುಮಕ್ಕಳು ಲಾಭ ಪಡೆಯುತ್ತಿದ್ದರು. ಆದರೆ ಈ ಶೈಕ್ಷಣಿಕ ವರ್ಷದಿಂದ ಅದನ್ನು 30 ಜನ ಮಕ್ಕಳಿಗೆ ವಿಸ್ತರಿಸಲಾಗಿದೆ.

- **Adobe Youth Voice (AYV) :** ಆಯ್ದು ಶಾಲೆಗಳಿಗೆ Adobe ಸಂಸ್ಥೆಯವರ ಸಹಕಾರದೊಂದಿಗೆ Digital Camera, Laptop, Handy Cam ಮುಂತಾದ ಪರಿಕರಗಳನ್ನು ಕೊಟ್ಟು ಆ ಶಾಲೆಯ 2 ಜನ ಶಿಕ್ಷಕರಿಗೆ ವಿಶೇಷ ತರಬೇತಿಯನ್ನು ನೀಡುವುದು. ಅವರು ಮಕ್ಕಳಿಗೆ ಇದರ ಜ್ಞಾನವನ್ನು ನೀಡಿ ಅವರ ಮುಖಾಂತರ ಸ್ಥಳೀಯ ಸಾಮಾಜಿಕ ಪಿಡುಗುಗಳನ್ನು ಆಧರಿಸಿ "Documentary Film" ತಯಾರಿಸುತ್ತಾರೆ. ಇದರಿಂದ ಮಕ್ಕಳಿಗೆ ಸಮಾಜದಲ್ಲಿರುವ ಸಮಸ್ಯೆಗಳ ಪರಿಚಯ ಆಗುತ್ತದೆ ಹಾಗೂ ಅದರ ನಿವಾರಣೆಗೆ ಅವರ ಕರ್ತವ್ಯಗಳೇನು ಎ೦ಬುದು ತಿಳಿದುಬರುತ್ತದೆ. ಈ ಕಾರ್ಯಕ್ರಮದಲ್ಲಿ ಈ ವರ್ಷ 18 ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು ಪ್ರತಿ ವರ್ಷ ಭಾಗವಹಿಸಿದ ಶಾಲೆಗಳ ಚಿತ್ರ ಪ್ರದರ್ಶ[5]ನ ಮತ್ತು ಭಾಗವಹಿಸಿದ ಶಾಲೆಗಳಿಗೆ ಬಹುಮಾನ ನೀಡುವ ವ್ಯವಸ್ಥೆಯನ್ನು ಮಾಡುತ್ತಿದೆ.

ವಂದನೆಗಳೊಂದಿಗೆ

ಲಲಿತ್‌ಪ್ರಸಾದ್
ಸ್ಟೇಟ್ ಪ್ರೋಗ್ರಾಂ ಮ್ಯಾನೇಜರ್
AIFT. ಬೆಂಗಳೂರು
ಮೋ: 9845892740